ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ.

ಪೈಲ್ಸ್ ಅಥವಾ ಮೂಲವ್ಯಾಧಿ ರೋಗವು ಜೀವಹಾನಿ ರೋಗವಲ್ಲ. ಆದರೆ ಜೀವ ಹಿಂಡುವಂತಹ ಸಮಸ್ಯೆ. ಇದು ತೀವ್ರ ಮುಜುಗರವನ್ನು ಎದುರಿಸುವ ಕಾಯಿಲೆ. ಆದರೆ ನಿರ್ಲಕ್ಷಿಸಿದರೆ ಕ್ಯಾನ್ಸರ್ ಆಗುವ ಸಾಧ್ಯತೆಯು ಕೂಡಾ ಇದೆ.

ಇದು ಹೆಣ್ಣು ಮಕ್ಕಳಲ್ಲಿ ಅತೀವವಾಗಿ ಕಂಡುಬರುತ್ತಿದೆ. ಮುನ್ನೆಚ್ಚರಿಕೆ ವಹಿಸಿದರೆ ಸಮಸ್ಯೆಯನ್ನು ಸ್ವಲ್ಪ ಮಟ್ಟಿಗಾದರೂ ಕಡಿಮೆ ಮಾಡಿಕೊಳ್ಳಬಹುದು.

- ಹೆಚ್ಚು ಹೆಚ್ಚು ನೀರು ಕುಡಿಯುವುದು
- ಎಳನೀರು ಸೇವನೆ
- ಗೋದಿ ಪದಾರ್ಥಗಳ ವರ್ಜ್ಯ
- ನಾರಿನಂಶ ಅತಿಯಾದ ಸೇವನೆ
- ಮಲಬದ್ಧತೆ ನಿಯಂತ್ರಣ
- ಬೆಳಿಗ್ಗೆ ಎದ್ದ ತಕ್ಷಣ ಬಿಸಿನೀರು ಸೇವನೆ, ರಾತ್ರಿ ಮಲಗುವಾಗ ಬಿಸಿಹಾಲು ಸೇವನೆ
- ಮಸಾಲೆ, ಖಾರ, ಅತಿ ಉಪ್ಪು, ಅತಿ ಹುಳಿ ಬೇಡ
- ಹೊಟ್ಟೆ ಬೊಜ್ಜು ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದು

ಆಯುರ್ವೇದ ಪ್ರಕಾರ ಮೂಲವ್ಯಾಧಿಯಲ್ಲಿ ಎರಡು ವಿಧ.

- ವಾತಜ: ಇದರಲ್ಲಿ ಅತೀವ ನೋವಿನ ಅನುಭವ ಇರುತ್ತದೆ.
- ರಕ್ತಜ: ಮಲಪ್ರವೃತ್ತಿಯ ಜೊತೆಗೆ ಅಥವಾ ಮುಂಚೆ ಅಥವಾ ನಂತರದಲ್ಲಿ ರಕ್ತ ಕಾಣಿಸಿಕೊಳ್ಳುವುದು. ಜತೆಗೆ ಉರಿಯ ಅನುಭವ ಇರುತ್ತದೆ.

## ಮೂಲವ್ಯಾಧಿಯ ವಿವಿಧ ಹಂತಗಳು

- ಮಾಂಸದ ಗಂಟು ಗುದದ್ವಾರದ ಒಳಗಡೆಯೇ ಇರುವುದು
- ಗಂಟು ಹೊರಗಡೆ ಬಂದು ತಾನೇ ಒಳಗಡೆ ಹೋಗುವುದು
- ಹೊರಗಡೆ ಬಂದಿದ್ದ ಪೈಲ್ಸ್ ಗಂಟು 10 ರಿಂದ 15 ನಿಮಿಷ ಬಿಟ್ಟು ನಿಧಾನವಾಗಿ ಒಳಗಡೆ ಹೋಗುವಂತದ್ದು
- ತೀವ್ರತೆಯ ಹಂತದಲ್ಲಿ ದಪ್ಪನೆಯ ಗಂಟು, ವಿಪರೀತ ಬಾಧೆ, ಸೋಂಕು ತಗಲುವಂತದ್ದು ಮತ್ತು ಗಂಟು ಗುದದ್ವಾರದ ಆಚೆನೆ ಇರುವಂತದ್ದು.

## ಪೈಲ್ಸ್‌ನ ಸಾಮಾನ್ಯ ಲಕ್ಷಣಗಳು

- ಗುದದ್ವಾರದಲ್ಲಿ ಅತೀವ ನೋವು
- ಮಲಬದ್ಧತೆ
- ಮಲಪ್ರವೃತ್ತಿಯ ನಂತರ ಅಥವಾ ಮುಂಚೆನೇ ರಕ್ತಸ್ರಾವ
- ರಕ್ತಹೀನತೆ
- ಗುದದ್ವಾರದಲ್ಲಿ ನವೆ ಮತ್ತು ಉರಿ ಆಗುವುದು
- ಗಂಟಿನ ಅನುಭವ.

ಮೂಲವ್ಯಾಧಿಯ ಯಾವುದೇ ಲಕ್ಷಣಗಳು ಅಥವಾ ಮುನ್ಸೂಚನೆ ಕಂಡುಬಂದಲ್ಲಿ ಯಾವುದೇ ನಾಚಿಕೆ, ಮುಜುಗರವಿಲ್ಲದೆ ಮುಕ್ತ ಮನಸ್ಸಿನಿಂದ ತಪಾಸಣೆ ಮಾಡಿಸಿಕೊಂಡರೆ ಈ ಕಾಯಿಲೆಯನ್ನು ಸಂಪೂರ್ಣವಾಗಿ ಗುಣಪಡಿಸಬಹುದು.



## ಆಯುರ್ವೇದ ಚಿಕಿತ್ಸೆ

ತ್ರಿಫಲಾ ಚೂರ್ಣ, ಕಾಂಚನಾರ ಗುಗ್ಗುಳು, ಅರ್ಶ ಕುಟಾರ ರಸ, ಕಾಸಿಸಾದಿ ತೈಲ ಮುಂತಾದವುಗಳನ್ನು ಆಯುರ್ವೇದ ವೈದ್ಯರ ಸಲಹೆಯಂತೆ ತೆಗೆದುಕೊಳ್ಳಬೇಕು. ಔಷಧಿಯ ಜೊತೆಗೆ ಕ್ಷಾರಸೂತ್ರ (ಔಷಧಿಯುಕ್ತ ದಾರವನ್ನು ಪೈಲ್ಸ್ ಗಂಟುಗಳಿಗೆ ನುರಿತ ಆಯುರ್ವೇದ ವೈದ್ಯರು ಹಾಕುವಂತಹ ವಿಧಾನ) ಚಿಕಿತ್ಸೆಯನ್ನು ಮಾಡಬಹುದು.

ಔಷಧಿಯ ಜೊತೆ ಜೊತೆಗೆ ಆಹಾರ ಪಥ್ಯವು ತುಂಬಾ ಸಹಾಯವಾಗುತ್ತದೆ. ಹೆಚ್ಚಾಗಿ ಹಸಿರು ತರಕಾರಿಗಳು, ಸೌತೆಕಾಯಿ, ಸೊಪ್ಪು, ಹಣ್ಣು, ನಾರಿನಂಶ ಇದ್ದಂತಹ ಪದಾರ್ಥಗಳು, ಹೆಚ್ಚು ನೀರು ಕುಡಿಯುವುದು ಮತ್ತು ದೈಹಿಕ ಚಟುವಟಿಕೆ ಜಾಸ್ತಿ ಮಾಡುವಂತಹ ಕೆಲಸ, ಹಿತಮಿತ ಆಹಾರ ಪದ್ಧತಿ, ಯೋಗ, ಪ್ರಾಣಾಯಾಮಗಳಿಂದ ಮೂಲವ್ಯಾಧಿಯ ಸಮಸ್ಯೆಯನ್ನು ಪರಿಹರಿಸಿಕೊಳ್ಳಬಹುದು.

(ವೈದ್ಯರ ಸಂಪರ್ಕ: 9916491041)




# ಸಯಾಟಿಕಾ ಸಮಸ್ಯೆಗೆ ಪರಿಹಾರವೇನು?




ರಿಲೀವ್ ಪೇನ್ ಸೆಂಟರ್‌ನ ಖ್ಯಾತ ನೋವು ನಿವಾರಣ ತಜ್ಞರು ಬೆನ್ನು ನೋವು, ಸಯಾಟಿಕ (ಸೊಂಟ ನರದ ನೋವು, ವಾತ, ಕಟಿವಾಯು) ಇನ್ನಿತರ ಸಮಸ್ಯೆಗಳ ಬಗ್ಗೆ ವಿವರವಾಗಿ ತಿಳಿಸಿರುತ್ತಾರೆ

**ಪ್ರ: ನಾನು ನಾಲ್ಕು ವರ್ಷದಿಂದ ಸೊಂಟ ಮತ್ತು ಕಾಲು ನೋವಿನಿಂದ ನರಳುತ್ತಿದ್ದೇನೆ. ದಿನೇ ದಿನೇ ಜಾಸ್ತಿ ಆಗಿರುವುದರಿಂದ ಕಳೆದ ವರ್ಷ ಸ್ಪೈನ್ ಆಪರೇಷನ್ ಕೂಡ ಆಯಿತು, ಏನು ನೋವು ನಿವಾರಣೆ ಆಗಿಲ್ಲ, ಜೀವನ ಪೂರ್ತಿ ಹೀಗೆ ಇರಬೇಕೆ ಎಂಬ ಭಯವಾಗಿದೆ. ಡಾಕ್ಟ್ರೇ, ಇದಕ್ಕೆ ಸೂಕ್ತ ಪರಿಹಾರವಿದೆಯೇ? ನ್ಯೂರಾಲಜಿಸ್ಟ್ ನನಗೆ ಸಯಾಟಿಕ ಆಗಿದೆ ಎಂದಿದ್ದರು, ಸಯಾಟಿಕ ಎಂದರೇನು?**

ಬೆನ್ನುಮೂಳೆಯ ಹಿಂಭಾಗದಲ್ಲಿ 'ಸಯಾಟಿಕಾ' ಎಂಬ ಪಂಚ ನರಗಳ ಸಮೂಹವೊಂದಿರುತ್ತದೆ. ಅದರ ಮೇಲೆ ಬೆನ್ನುಮೂಳೆಯ ಒತ್ತಡದಿಂದಾಗಿ ನೋವು ಕಾಡುತ್ತಿರುತ್ತದೆ. ಅದನ್ನೇ 'ಸಯಾಟಿಕ ನೋವು' ಎಂದು ಹೇಳಲಾಗುತ್ತದೆ.

ಸೊಂಟದಿಂದ ಪಾದದತನಕ ಈ ನರ ವ್ಯಾಪಿಸಿಕೊಂಡಿರುತ್ತದೆ. ಈ ನರದ ಮೇಲೆ ಅತಿಯಾದ ಒತ್ತಡ ಬಿದ್ದರೆ ಸೊಂಟ ಹಾಗೂ ಕಾಲಿನ ಹಿಂಭಾಗದಲ್ಲಿ ವಿದ್ಯುತ್ ಶಾಕ್ ಹೊಡೆದಂತೆ ನೋವು ಬಾಧಿಸುತ್ತಿರುತ್ತದೆ.

**ಲಕ್ಷಣಗಳು:** ಸೊಂಟನೋವಿನ ಜೊತೆಗೆ ಕಾಲುನೋವು ಕೂಡ ಇರುತ್ತದೆ. ಅಂಗಾತವಾಗಿ ಮಲಗಲು ನೋವು ಎನಿಸುತ್ತದೆ. ಬಗ್ಗಲು ಕೂಡ ಆಗುವುದಿಲ್ಲ

**ಈ ತರಹದ ಸೊಂಟ ನೋವುಗಳಿಗೆ ಯಾವ ರೀತಿಯ ಚಿಕಿತ್ಸೆ ಉಪಲಬ್ಧವಿದೆ?**

**'ರಿಲೀವ್' ಪೇನ್ ಸೆಂಟರ್‌ನಲ್ಲಿ ಮಲ್ಟಿಮಾಡಲ್ ಚಿಕಿತ್ಸೆ**

ಇದು ಶಸ್ತ್ರಚಿಕಿತ್ಸೆ ರಹಿತ ಬಹುವಿಧ ಚಿಕಿತ್ಸೆ. ವ್ಯಕ್ತಿಯೊಬ್ಬನ ಪರೀಕ್ಷೆ ನಡೆಸಿ ನಂತರ ಚಿಕಿತ್ಸೆ ಕೈಗೊಳ್ಳಲಾಗುತ್ತದೆ. ನೋವು ಹಾಗೂ ಊತ ಕಡಿಮೆ ಮಾಡಲು ಔಷಧಿಗಳನ್ನು ಕೊಡಲಾಗುತ್ತದೆ. ಕೆಲವು ಸರಳ ವ್ಯಾಯಾಮ ಹೇಳಲಾಗುತ್ತದೆ. ಹಾಗೂ ಫಿಸಿಯೋಥೆರಪಿ ಮಾಡಿಸಿಕೊಳ್ಳಬೇಕಾಗುತ್ತದೆ.

**ಟ್ರಾನ್ಸ್‌ಫೋರಮಿನಲ್ ಎಪಿಡ್ಯೂರಲ್**

ನರಗಳು ಹಾಗೂ ಡಿಸ್ಕ್‌ಮೇಲಿನ ಊತ ಕಡಿಮೆ ಮಾಡಲು 'ಟ್ರಾನ್ಸ್‌ಫೋರಮಿನಲ್ ಎಪಿಡ್ಯೂರಲ್' ಇಂಜೆಕ್ಷನ್ ನೀಡಲಾಗುತ್ತದೆ.

**ಪಲ್ಸೆಡ್ ರೇಡಿಯೊಫ್ರೀಕ್ವೆನ್ಸಿ ಟ್ರೀಟ್‌ಮೆಂಟ್**

ಪಾಶ್ಚಿಮಾತ್ಯ ದೇಶಗಳಲ್ಲಿ ಇದು ರೂಢಿಯಲ್ಲಿದೆ. ರೇಡಿಯೋ ಫ್ರಿಕ್ವೆನ್ಸಿ ಅಲೆಗಳು ನರಗಳನ್ನು ನಿಷ್ಕ್ರಿಯಗೊಳಿಸಿ ನೋವನ್ನು ಉಪಶಮನ ಮಾಡುತ್ತವೆ. ಇದು ನರಗಳಿಗೆ ಹಾನಿಮಾಡುವುದಿಲ್ಲ.

**ಸ್ಪೈನಲ್ ಕಾರ್ಡ್ ಸ್ಟಿಮ್ಯುಲೇಶನ್**

ಹಲವು ಸಲ ಬೆನ್ನು ಮೂಳೆಯ ಶಸ್ತ್ರಚಿಕಿತ್ಸೆಗೊಳಗಾದವರಿಗೂ ಸಯಾಟಿಕಾ ನೋವು ಕಾಣಿಸಿಕೊಳ್ಳುತ್ತದೆ. ಪದೇ ಪದೇ ಶಸ್ತ್ರಚಿಕಿತ್ಸೆಗೊಳಗಾಗುವುದರಿಂದ ಸ್ನಾಯುಗಳು ದುರ್ಬಲವಾಗುತ್ತವೆ. ಅಂಥವರಿಗೆ ನೋವು ಪುನಃ ಪುನಃ ಬರುತ್ತಿದ್ದರೆ ಸ್ಪೈನಲ್‌ಕಾರ್ಡ್ ಸ್ಟಿಮುಲೇಶನ್ ಟ್ರೀಟ್‌ಮೆಂಟ್ ಕೊಡಲಾಗುತ್ತದೆ.

RELIV PAIN CENTER

"life without pain"

ಬೆಂಗಳೂರಿನ ಪ್ರಪ್ರಥಮ ಸೂಪರ್ ಸ್ಪೆಷಾಲಿಟಿ ನೋವು ನಿವಾರಣ ಕೇಂದ್ರ

| | |
|---|---|
| # 156, 25th Cross, 19th Main, Rajajinagar, 2nd Block, Bengaluru-560 010. | 36/52, 27th Cross, 12th Main, 4th Block, Jayanagar, Bengaluru-560 011 |

Ph: 888 49 50 123 / 234 / 345/ 444

info@relivpaincenter.com | www.relivpaincenter.com